**ಪದವಿ ಪೂರ್ವ ಶಿಕ್ಷಣ ಇಲಾಖೆ**

**ಪ್ರಥಮ  ಪಿಯುಸಿ ವ್ಯವಹಾರ ಅಧ್ಯಯನ ಮಾದರಿ ಪ್ರಶ್ನೆ ಪತ್ರಿಕೆ 2021-22**

**ವಿಭಾಗ – ಎ**

**I) ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. ಬಹು ಆಯ್ಕೆಯ ಪ್ರಶ್ನೆಗಳನ್ನು ಉತ್ತರಿಸುವಾಗ, ಸರಿ ಉತ್ತರದ ಕ್ರಮ ಸಂಖ್ಯೆಯೊಂದಿಗೆ ಸರಿಯಾದ ಉತ್ತರವನ್ನು ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.**

**10 X 1 = 10**

01. ಜನರು ತಮ್ಮ ಕೆಲಸಕ್ಕಾಗಿ ಸಂಬಳ ಅಥವಾ ಕೂಲಿಯನ್ನು ಪಡೆಯುವ ಆರ್ಥಿಕ ಚಟುವಟಿಕೆಯನ್ನು ಹೆಸರಿಸಿ.
02. ಅವಿಭಕ್ತ ಹಿಂದೂ ಕುಟುಂಬ ವ್ಯವಹಾರ ಸಂಸ್ಥೆಯ ಮುಖ್ಯಸ್ಥನನ್ನು ಹೀಗೆಂದು ಕರೆಯುತ್ತಾರೆ?
    ಅ) ಮಾಲೀಕ
    ಆ) ನಿರ್ದೇಶಕ
    ಇ) ಕರ್ತ
    ಈ) ವ್ಯವಸ್ಥಾಪಕ
03. ಇಲಾಖಾ ಉದ್ದಿಮೆಗೆ ಒಂದು ಉದಾಹರಣೆ ಕೊಡಿ.
04. ಭಾರತದಲ್ಲಿ ಬ್ಯಾಂಕಿಂಗ್ ಸೇವೆಗಳನ್ನು ಯಾವ ಕಾಯಿದೆ ನಿಯಂತ್ರಿಸುತ್ತದೆ?
05. --- ಡಿ ಟಿ ಹೆಚ್ ಸೇವೆಯನ್ನು ಒದಗಿಸುತ್ತದೆ.
    ಅ) ಸಾರಿಗೆ ಕಂಪನಿಗಳು
    ಆ) ಬ್ಯಾಂಕುಗಳು
    ಇ) ಸೆಲ್ಯುಲರ್ ಕಂಪನಿಗಳು
    ಈ) ಮೇಲಿನ ಯಾವುದೂ ಅಲ್ಲ
06. ಇ-ವ್ಯವಹಾರಕ್ಕೆ ಅತಿ ಹೆಚ್ಚು ಸೂಕ್ತವಾದ ಪಾವತಿ ವಿಧಾನ
    ಅ) ವಿಲೇವಾರಿಯ ನಂತರ ನಗದು
    ಆ) ಚೆಕ್ಕುಗಳು
    ಇ) ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡುಗಳು
    ಈ) ಇ-ನಗದು
07. ಮಾಲಿನ್ಯದ ಯಾವುದಾದರೂ ಒಂದು ವಿಧವನ್ನು ತಿಳಿಸಿ.
08. ಪರಿಚಯ ಪತ್ರಿಕೆಯನ್ನು ಈ ಕಂಪನಿ ಬಿಡುಗಡೆ ಮಾಡುತ್ತದೆ.
    ಅ) ಖಾಸಗಿ ಕಂಪನಿ
    ಆ) ಸಾರ್ವಜನಿಕರಿಂದ ಬಂಡವಾಳ ಸಂಗ್ರಹಿಸುವ ಸಾರ್ವಜನಿಕ ಕಂಪನಿ
    ಇ) ಸಾರ್ವಜನಿಕ ಉದ್ಯಮ
    ಈ) ಸರ್ಕಾರಿ ಕಂಪನಿ
09. SEBI ಅನ್ನು ವಿಸ್ತರಿಸಿ.
10. ವ್ಯವಹಾರದ ಹಣಕಾಸು ಎಂದರೇನು?
11. ಫ್ಯಾಕ್ಟರಿಂಗ್‌ನ ಒಂದು ವಿಧವನ್ನು ತಿಳಿಸಿ.
12. ಯಾವ ವರ್ಷದಲ್ಲಿ MSMED ಕಾಯಿದೆಯನ್ನು ಜಾರಿಗೆ ತರಲಾಯಿತು?
13. ಯಾವ ವಿಧದ ವ್ಯಾಪಾರಿಗಳು ಉತ್ಪಾದಕರು ಹಾಗು ಚಿಲ್ಲರೆ ವ್ಯಾಪಾರಿಗಳ ನಡುವೆ ಸಂಪರ್ಕದ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಾರೆ?
14. ಸೇವೆಗಳಲ್ಲಿ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಒಂದು ಉದಾಹರಣೆಯನ್ನು ಕೊಡಿ.
15. ಆಮದು ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಅಗತ್ಯವಿರುವುದಿಲ್ಲ?
    ಅ) ಭರಾವಣೆ ಪತ್ರ
    ಆ) ಹಡಗು ರವಾನೆ ಪತ್ರ
    ಇ) ಮೂಲೋತ್ಪತ್ತಿ ಪ್ರಮಾಣ ಪತ್ರ
    ಈ) ಸಲಹಾ ಪತ್ರ

**ವಿಭಾಗ - ಬಿ**

**II) ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 2 – 3 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು.**

**10 X 2 = 20**

16. ವ್ಯವಹಾರ ಎಂದರೇನು?
17. ನಿರ್ದಿಷ್ಟ ಪಾಲುದಾರಿಕೆ ಎಂದರೇನು?
18. ಸರ್ಕಾರಿ ಕಂಪನಿಗಳ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.
19. ಸರಕು ಮತ್ತು ಸೇವೆಗಳಿಗಿರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.
20. ಇ-ವ್ಯವಹಾರದ ಯಶಸ್ವಿ ಅನುಷ್ಠಾನಕ್ಕೆ ಅಗತ್ಯವಾದ ಯಾವುದಾದರೂ ಎರಡು ಸಂಪನ್ಮೂಲಗಳನ್ನು ತಿಳಿಸಿ.
21. ವ್ಯವಹಾರದ ಸಾಮಾಜಿಕ ಹೊಣೆಗಾರಿಕೆ ಎಂದರೇನು?
22. ವ್ಯವಹಾರದ ನೈತಿಕತೆಯ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.
23. ಕನಿಷ್ಠ ವಂತಿಕೆಯ ಅರ್ಥವನ್ನು ಕೊಡಿ.
24. ಪ್ರಾಶಸ್ತ್ಯದ ಷೇರುಗಳ ಯಾವುದಾದರೂ ಎರಡು ವಿಧಗಳನ್ನು ತಿಳಿಸಿ.
25. ಉದ್ಯಮಶೀಲತೆ ಎಂದರೇನು?

26. ಬೌದ್ಧಿಕ ಆಸ್ತಿ ಹಕ್ಕು ಎಂದರೇನು?
27. ಅಂಚೆ ಆದೇಶದ ವ್ಯವಹಾರದಲ್ಲಿ ಹಣ ಪಾವತಿಸಲು ಗ್ರಾಹಕರಿಗಿರುವ ಯಾವುದಾದರೂ ಎರಡು ಪರ್ಯಾಯ ವಿಧಾನಗಳನ್ನು ತಿಳಿಸಿ.
28. ಮಾರಾಟ ಯಂತ್ರಗಳ ಅರ್ಥವನ್ನು ಕೊಡಿ.
29. ವಿನಿಯೋಜಿತ ಹೂಡಿಕೆ ಎಂದರೇನು?
30. ಭಾರತ ಆಮದು ಮಾಡಿಕೊಳ್ಳುತ್ತಿರುವ ಯಾವುದಾದರೂ ಎರಡು ಪ್ರಮುಖ ಸರಕುಗಳನ್ನು ಹೆಸರಿಸಿ.

**ವಿಭಾಗ – ಸಿ**

**III) ಕೆಳಗಿನ ಯಾವುದಾದರೂ ಏಳು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 10 – 12 ವಾಕ್ಯಗಳಲ್ಲಿ ಉತ್ತರಿಸಿ. ಪ್ರತಿ ಪ್ರಶ್ನೆಗೆ ನಾಲ್ಕು ಅಂಕಗಳು.**

**7 X 4 = 28**

31. ಉತ್ಪಾದನಾ ಕೈಗಾರಿಕೆಗಳ ವಿವಿಧ ಪ್ರಕಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
*32.* ವ್ಯವಹಾರ ನಷ್ಟಭಯದ ಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
33. *ಏಕವ್ಯಕ್ತಿ ಮಾಲೀಕತ್ವ ಪ್ರಕಾರದ ವ್ಯವಹಾರ ಸಂಘಟನೆಯ* ಯಾವುದಾದರೂ ನಾಲ್ಕು ಅನುಕೂಲತೆಗಳನ್ನು ವಿವರಿಸಿ.
34. ಇ–ವ್ಯವಹಾರದ ಯಾವುದಾದರೂ ನಾಲ್ಕು ಪ್ರಯೋಜನಗಳನ್ನು ವಿವರಿಸಿ.
35. ಹೊರಗುತ್ತಿಗೆಯ ಅಗತ್ಯವನ್ನು ಸ್ಪಷ್ಟೀಕರಿಸಲು ಯಾವುದಾದರೂ ನಾಲ್ಕು ಕಾರಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
36. ಸಾಮಾಜಿಕ ಹೊಣೆಗಾರಿಕೆಯ ಪರವಾಗಿರುವ ಯಾವುದಾದರೂ ನಾಲ್ಕು ವಾದಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
37. ನೌಕರರಿಗೆ ಸಂಬಂಧಿಸಿದಂತೆ ವ್ಯವಹಾರದ ಸಾಮಾಜಿಕ ಹೊಣೆಗಾರಿಕೆಯನ್ನು ವಿವರಿಸಿ.
38. ಕಂಪನಿಯ ಮನವಿ ಪತ್ರದ ಯಾವುದಾದರು ನಾಲ್ಕು ಕಲಮುಗಳನ್ನು ವಿವರಿಸಿ.
39. ಲಘು ಟಿಪ್ಪಣಿ ಬರೆಯಿರಿ:
    ಅ) ಸಾರ್ವಜನಿಕ ಠೇವಣಿಗಳು
    ಆ) ವಾಣಿಜ್ಯ ಪತ್ರಗಳು
40. ಹಣಕಾಸಿನ ಮೂಲವಾಗಿ ಸಾಲ ಪತ್ರಗಳ ಅನುಕೂಲತೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
41. ಭಾರತದಲ್ಲಿ ಸಣ್ಣ ವ್ಯವಹಾರದ ಪಾತ್ರವನ್ನು ಎತ್ತಿ ಹಿಡಿಯುವ ಯಾವುದಾದರೂ ನಾಲ್ಕು ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
42. ಸಂಚಾರಿ ಚಿಲ್ಲರೆ ವ್ಯಾಪಾರಿಗಳ ವಿವಿಧ ಪ್ರಕಾರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
43. ಇಲಾಖಾ ಮಳಿಗೆಗಳ ಯಾವುದಾದರೂ ನಾಲ್ಕು ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
44. ಅಂತಾರಾಷ್ಟ್ರೀಯ ವ್ಯವಹಾರದಿಂದ ರಾಷ್ಟ್ರಗಳಿಗಾಗುವ ನಾಲ್ಕು ಪ್ರಯೋಜನಗಳನ್ನು ತಿಳಿಸಿ.

**ವಿಭಾಗ – ಡಿ**

**IV) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 20 – 25 ವಾಕ್ಯಗಳಲ್ಲಿ ಉತ್ತರಿಸಿ.**
**ಪ್ರತಿ ಪ್ರಶ್ನೆಗೆ ಎಂಟು ಅಂಕಗಳು.** **4 X 8 = 32**

45. ಸಹಕಾರ ಸಂಘಗಳು ಎಂದರೇನು? ಸಹಕಾರ ಸಂಘಗಳ ವಿವಿಧ ಪ್ರಕಾರಗಳನ್ನು ವಿವರಿಸಿ.
46. ಕೂಡು ಬಂಡವಾಳ ಕಂಪನಿಗಳ ಲಕ್ಷಣಗಳನ್ನು ವಿವರಿಸಿ.
47. ಶಾಸನ ಬದ್ಧ ನಿಗಮಗಳ ಯಾವುದಾದರೂ ನಾಲ್ಕು ಅನುಕೂಲಗಳನ್ನು ಮತ್ತು ನಾಲ್ಕು ಮಿತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
48. ವಿಮೆಯ ತತ್ವಗಳನ್ನು ವಿವರಿಸಿ.
49. ದಾಸ್ತಾನುಗಾರಿಕೆ ಎಂದರೇನು? ದಾಸ್ತಾನುಗಾರಿಕೆಯ ಕಾರ್ಯಗಳನ್ನು ವಿವರಿಸಿ.
50. ಹಣಕಾಸಿನ ಮೂಲವಾಗಿ ಸಾಮಾನ್ಯ ಶೇರುಗಳ ಅನುಕೂಲಗಳನ್ನು ಮತ್ತು ಮಿತಿಗಳನ್ನು ವಿವರಿಸಿ.
51. ಸಗಟು ವ್ಯಾಪಾರಿ ಎಂದರೆ ಯಾರು? ಉತ್ಪಾದಕರಿಗೆ ಸಗಟು ವ್ಯಾಪಾರಿಗಳ ಸೇವೆಯನ್ನು ವಿವರಿಸಿ.
52. ರಫ್ತು ವ್ಯಾಪಾರದಲ್ಲಿ ಅಬಕಾರಿ ತೀರುವಳಿಯನ್ನು ಪಡೆಯುವವರೆಗೆ ಅನುಸರಿಸಬೇಕಾದ ಕ್ರಮಗಳನ್ನು ವಿವರಿಸಿ.

**ವಿಭಾಗ – ಇ (ಪ್ರಾಯೋಗಿಕ ಪ್ರಶ್ನೆಗಳು)**

**V) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು.** **2 X 5 = 10**

53. ನೀವು ಒಬ್ಬ ವ್ಯವಹಾರಸ್ಥರೆಂದು ಭಾವಿಸಿ ಜಂಟಿ ಉದ್ದಿಮೆಯಲ್ಲಿ ತೊಡಗುವುದರಿಂದ ಯಾವ ಅನುಕೂಲಗಳನ್ನು ಹೊಂದುವಿರೆಂದು ತಿಳಿಸಿ.
54. ಆನ್‌ಲೈನ್ ಗ್ರಾಹಕರಾಗಿ, ನಿಮ್ಮ ಗಣಕಯಂತ್ರದೊಳಗೆ ವಿದ್ಯುನ್ಮಾನವಾಗಿ ವಿಲೇವಾರಿ ಪಡೆಯಬಹುದಾದ ಯಾವುದಾದರೂ ಐದು ಮಾಹಿತಿ ಸಾಂದ್ರ ಉತ್ಪನ್ನಗಳನ್ನು ತಿಳಿಸಿ.
55. ಒಬ್ಬ ಪ್ರವರ್ತಕರಾಗಿ, ಕೂಡು ಬಂಡವಾಳ ಕಂಪನಿಯ ನೋಂದಣಿಗಾಗಿ ತಯಾರಿಸಬೇಕಾದ ಐದು ಮುಖ್ಯ ದಾಖಲೆಗಳನ್ನು ತಿಳಿಸಿ.
56. ಅಂತಾರಾಷ್ಟ್ರೀಯ ವ್ಯವಹಾರವನ್ನು ಮಾಡಲು ಆಕಾಂಕ್ಷಿಗಳಾಗಿರುವ ನೀವು, ಅಂತಾರಾಷ್ಟ್ರೀಯ ವ್ಯವಹಾರವನ್ನು ಪ್ರವೇಶಿಸುವ ಯಾವ ಪ್ರಕಾರಗಳನ್ನು ನೋಡುತ್ತೀರಿ?

*****